
ಭಾರತೀಯ ಮತ್ತು ಕನ್ನಡ ದರ್ಶನಗಳತ್ತ ಮುಖಮಾಡಿದ್ದು ಡಿಆರ್ ಅವರ ಬೌದ್ಧಿಕ ಜಿಗಿತಗಳಿಗೆ ಉದಾಹರಣೆ. ‘ವಿಕಲ್ಪ’, ‘ಪ್ರತಿ ಸಂಸ್ಕೃತಿ’, ‘ವಿದ್ರೋಹ’, ‘ಸಂಕಲನಾನುಸಂಧಾನ’, ‘ಕುಲಾತ್ಮಕ ಪಠ್ಯ’, ‘ಅಧಿಕಾರ ವಿಘಟನೆ’, ‘ವಿಸ್ಮೃತಿ’, ‘ಸಾಹಿತ್ಯ ಸಂಸ್ಕೃತಿ’ ಮುಂತಾದವು ಅವರು ಪರಿಚಯಿಸಿದ ಪಾರಿಭಾಷಿಕ ಪದಗಳು. ಮಾರ್ಗ–ದೇಶಿಯ ಸಂಬಂಧವನ್ನು ಸಮಸ್ಯಾತ್ಮಕಗೊಳಿಸುವುದು; ತಳ ಸಮುದಾಯಗಳ ಸಾಂಸ್ಕೃತಿಕ ಲೋಕದ ಅಧ್ಯಯನಗಳ ಕಡೆ ಗಮನ ಸೆಳೆದಿದ್ದು; ಸಾಹಿತ್ಯ ವಿಮರ್ಶೆಯನ್ನು ಲೋಕವಿಮರ್ಶೆಯಾಗಿ ನೋಡುವುದು; ಸಮಸ್ತ ಜ್ಞಾನವೂ ಒಂದು ಕಥನವೆಂದು ಪರಿಭಾವಿಸಿ, ಎಲ್ಲ ಜ್ಞಾನಗಳನ್ನು ಸಾಹಿತ್ಯ ಮೀಮಾಂಸೆಯ ಪರಿಕರಗಳಿಂದ ಪ್ರವೇಶಿಸಲು ಸಾಧ್ಯವೆಂದು ತೋರಿಸುವ ಪ್ರಯತ್ನ ಮಾಡಿದ್ದು ಡಿಆರ್ ಕನ್ನಡದ ವಿಮರ್ಶೆಗೆ ಸೇರಿಸಿದ ಕೆಲವು ಹೊಸ ತಿಳಿವಳಿಕೆಗಳು. ಪಾಶ್ಚಾತ್ಯ ತತ್ವಶಾಸ್ತ್ರ, ಸಾಮಾಜಿಕ ಸಿದ್ಧಾಂತ, ಬೌದ್ಧ ಮತ್ತು ಇತರ ಭಾರತೀಯ ದರ್ಶನಗಳನ್ನು ಕನ್ನಡದ ವಾಙ್ಮಯದಲ್ಲಿ ಉಪಯೋಗಿಸಿ ಅಂತರ್ ಶಿಸ್ತೀಯ ಅಧ್ಯಯನದ ಮಾದರಿಯನ್ನು ಡಿಆರ್ ಕಟ್ಟಿದರು.




ಸಾಹಿತ್ಯ ಲೋಕವನ್ನು ವಿವರಿಸಲು ಡಿಆರ್ ಅವರು ಸೃಷ್ಟಿಸಿದ ಭಾಷೆ, ಶಬ್ದ ಸಂಪತ್ತು, ಸಂಕೀರ್ಣವಾದ ವಾಕ್ಯ ರಚನೆಗಳು ಆರಂಭಿಕ ಓದುಗರಿಗೆ ಹಿಡಿಸದೇ ಇರಬಹುದು. ಆದರೆ ಅವು ಸಂಕೀರ್ಣವಾದ ವಿಚಾರಗಳನ್ನು ಸೆರೆ ಹಿಡಿಯಲು ಪ್ರಯತ್ನಿಸುವ ಮಾರ್ಗಗಳೆಂದು ಮರೆಯಬಾರದು. ಅವುಗಳ ಮಿತಿಯನ್ನು ಗುರುತಿಸಿ ಇಂದು ಕನ್ನಡದ ವಿದ್ವತ್ ಪರಿಭಾಷೆಯನ್ನು ಕಟ್ಟಬೇಕಷ್ಟೇ.

ಮುಂದುವರಿದು, ಡಿಆರ್ ಅವರು ತಮ್ಮ ಅಧ್ಯಯನಗಳಲ್ಲಿ ಕಥನ ಮತ್ತು ರೂಪಕಗಳನ್ನು ಬಳಸುವ ವಿಧಾನದ ಕುರಿತು ಹೆಚ್ಚು ಚರ್ಚೆಯಾದಷ್ಟು ಅವರು ಅರ್ಥಧಾರಿಯಾಗಿ ಮಾಡುವ ಕೆಲಸವನ್ನು ಚರ್ಚಿಸಿದಂತಿಲ್ಲ. ಪಠ್ಯ ಮತ್ತು ಲೋಕಗಳನ್ನು ‘ಓದು’ವುದರಲ್ಲಿಯೇ ಅವರ ಪ್ರತಿಭೆ ಅಡಗಿದೆ ಎಂಬುದು ನನ್ನ ವಾದ. ಉದಾಹರಣೆಗೆ, ‘ಸಾಹಿತ್ಯ ಕಥನ’ದಲ್ಲಿ ಚಂದ್ರಕೀರ್ತಿ ಮತ್ತು ರವಿಕೀರ್ತಿಯವರ ಜಾನಪದ ಕಥೆಯನ್ನಿಟ್ಟುಕೊಂಡು ವಸಾಹತು ಷಾಹಿಯ ಸಿದ್ಧಾಂತ ವನ್ನು ಅವರು ಅರ್ಥೈಸುವುದು ಮನೋವೈಜ್ಞಾನಿಕ ಪರಿಪ್ರೇಕ್ಷ್ಯದಲ್ಲಿ. ಈಗ ಅದರಲ್ಲಿ ನಮಗೆ ಮಿತಿಗಳು ಕಾಣಬಹುದು. ಆದರೆ ಅಲ್ಲಿ ಕಥೆ, ಘಟನೆಗಳನ್ನು ವಿಶ್ಲೇಷಣೆಯಲ್ಲಿ ಹೇಗೆ ಮಾರ್ಮಿಕವಾಗಿ ಬಳಸಬಹುದೆಂಬ ಅರ್ಥಶಾಸ್ತ್ರದ (ಹರ್ಮ್ಯುನಿಯಾಟಿಕ್ಸ್)ಪಾಠವಿದೆ; ‘ದಿ ಫ್ಲೇಮಿಂಗ್ ಫೀಟ್’ನಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಒಟ್ಟಾಗಿ ಅರ್ಥೈಸಿದ್ದು ಇತಿಹಾಸಕಾರ ರಾಮಚಂದ್ರ ಗುಹಾ ಅಂತಹವರ ಕಣ್ಣನ್ನು ತೆರೆಸಿದೆ. ಅಷ್ಟೇ ಅಲ್ಲದೆ, ಈ ಅರ್ಥೈಸುವಿಕೆ ಗಾಂಧಿ– ಅಂಬೇಡ್ಕರ್ ಅವರ ಅನುಸಂಧಾನದ ದಾರಿಯನ್ನು ನಿರ್ಮಿಸಿದ್ದು, ಕನ್ನಡ ಬೌದ್ಧಿಕ ಲೋಕದ ಅನನ್ಯತೆಯಾಗಿ ಗಟ್ಟಿಗೊಂಡಿತು. ಅದು ದೇವನೂರ ಮಹಾದೇವ ಮತ್ತು ಮೊಗಳ್ಳಿ ಗಣೇಶ ಅಂಥವರಲ್ಲಿ ಮುಂದುವರಿದಿದ್ದನ್ನು ಕಾಣ ಬಹುದು.

‘ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ’ಯಲ್ಲಿ ಡಿಆರ್ ಶೂನ್ಯಸಂಪಾದನೆಗಳನ್ನು ವೀರಶೈವ ಧರ್ಮ ಸಂಘಟನೆಗೊಂಡು ಸಾಂಸ್ಥೀಕರಣಗೊಳ್ಳಲು ಹುಟ್ಟಿ ಕೊಂಡ ಕುಲಾತ್ಮಕ ಪಠ್ಯಗಳೆಂದು ‘ಓದು’ತ್ತಾರೆ; ಇದೇ ಪುಸ್ತಕದಲ್ಲಿ ಇನ್ನೊಂದೆಡೆ ಲಿಂಗ ಬೀಳುವುದರ ಕುರಿತು ಇರುವ ವಚನವೊಂದನ್ನಿಟ್ಟುಕೊಂಡು ಸಂಕೇತಗಳ ಮೂಲಕ ಮಾಡುವ ಹಿಂಸೆಯ ಇತಿಹಾಸವನ್ನು ಮತ್ತು ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಹಿಂಸೆಯನ್ನು ನೆನಪಿಸುತ್ತಾರೆ. ಕೆಲವೊಮ್ಮೆ ಇದು ಅತಿಯಾದ ಅರ್ಥೈಸುವಿಕೆ ಎನಿಸಿದರೂ, ಮಾನವಿಕ ಅಧ್ಯಯನಗಳಲ್ಲಿ ಹೊಸ ಹೊಳಹು ನೀಡಲು ಅರ್ಥಧಾರಿಗಳು ಕೈಗೊಳ್ಳುವ ಕ್ರಾಂತಿಕಾರಿ (ರಾಡಿಕಲ್) ಓದಿನ ಕ್ರಮ ಎಂದು ನಾವು ನೋಡಬೇಕು.

ಮರಣೋತ್ತರವಾಗಿ ಪ್ರಕಟಗೊಂಡ ಡಿಆರ್ ಅವರ ಕೊನೆಯ ಕೃತಿ ‘ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ’